ಪ್ರದೇಶವನ್ನು ನೀವು ಕೊಡುವುದಿಲ್ಲ ಎಂಬುದನ್ನು ತಿಳಿಸಬೇಕು. ಈ ನಿರ್ಬಂಧ ಇದ್ದಿದ್ದರೆ ಸುಮಾರು 40 ವರ್ಷಗಳಿಂದ ಈ ಜಮೀನನ್ನು ಇದುವರೆಗೂ ಮಾಡಿಕೊಂಡು ಬಂದಿದ್ದಾರಲ್ಲಾ ಅವರಿಗೆ ತೊಂದರೆ ಆಗುವುದಿಲ್ಲವೇ? ಹಾಗೆ ಆಗಿದ್ದರೆ ಮೊದಲಿನ ಕೆರೆಗೆ ಏನು ತೊಂದರೆ ಆಗಿದೆ? ಈ ಎರಡನ್ನು ಹೇಳಿ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ನಾವು ಏನಾದರೂ ಕೂಡ ಇರತಕ್ಕಂಥ ಕಡೆಯಲ್ಲಿ ಸಾಗುವಳಿ ಮಾಡಿರತಕ್ಕಂಥ 434 ಎಕರೆ ಜಮೀನಿನಲ್ಲಿ 248 ಜನರಿಗೆ ಕೊಡತಕ್ಕಂಥಾದ್ದು ಆದರೆ ಆ ಕೆರೆಯಲ್ಲಿ ಎರಡು ಕಿಲೋಮೀಟರ್ ದೂರ ಇದ್ದರೂ ಕೂಡ ಅಚ್ಚುಕಟ್ಟು ಪ್ರದೇಶಕ್ಕೆ ತೊಂದರೆ ಆಗುತ್ತದೆ. ನೀರುಕೊಡತಕ್ಕಂಥಾದ್ದಕ್ಕೆ ಹೂಳು ತುಂಬುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ : ಸರ್ಕಾರದವರು ಏನಾದರೂ ನಿಬಂಧನೆ ಹಾಕಿದ್ದಾರೆಯೇ? ನಿಬಂಧನೆಯ ಹಿಂಭಾಗದಲ್ಲಿ ಎಷ್ಟು ದೂರ ಇದೆ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎಷ್ಟು ದೂರ ಎನ್ನತಕ್ಕಂಥಾದ್ದನ್ನು ಕೂಡ ನಾವು ಇನ್ನೂ ನಿಗಧಿ ಮಾಡಿ ಹೇಳುತ್ತೇವೆ. ಇಲ್ಲಿಯವರೆಗೂ ಕೂಡ ನಾವು ಕೆರೆ ಅಂಗಳದಲ್ಲೂ ಕೂಡ ಸೈಟ್ಸ್ ಮಾಡಿ ಕೊಡತಕ್ಕಂಥಾದ್ದು ಪರವಾನಿಗೆ ಕೊಡತಕ್ಕದ್ದು ಇದೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳು ಲಾರ್ಜರ್ ಇಂಟ್ರೆಸ್ಟ್‌ನಿಂದ ಈ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ನಾವು ಯಾರಾದರೂ ಒಬ್ಬ ಖಾಸಗಿಯವರಿಗೆ ಕೊಟ್ಟಿಲ್ಲ. ಅಲ್ಲಿ ರೈತರಿಂದ ದೂರು ಏನು ಬಂದಿದೆ ಮನವಿ ಏನು ಬಂದಿದೆ ಅದನ್ನು ಆಧರಿಸಿ ಅದರ ಆಧಾರದ ಮೇಲೆ ನಾವು ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ವಿಷಯ : ಹರಿಜನಗಿರಿ ಜನರ ಉಂಬಳಿ ಜಮೀನನ್ನು ಖಾಯಂ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 129(412)

ಶ್ರೀ ಕರಿಯಣ್ಣ (ಹೊಳೇಹೊನ್ನೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹರಿಜನಗಿರಿಜನರ ಉಂಬಳಿ ಜಮೀನನ್ನು ಖಾಯಂ ಮಾಡಲು ಸಕಾಲದಲ್ಲಿ ನೀಡಲಾದ ಅರ್ಜಿಗಳನ್ನು ಸರ್ಕಾರದವರು ಪರಿಗಣಿಸಲು ಸೂಕ್ತಕ್ರಮ ಕೈಗೊಳ್ಳಲು ಆದೇಶಿಸುವವರೆ?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಕರ್ನಾಟಕದಲ್ಲಿ ವಿವಿದ ಇನಾಂ ಜಮೀನುಗಳಿಗೆ ಬೇರೆ ಬೇರೆ ಇನಾಂ ಕಾಯ್ದೆಗಳಲ್ಲಿ ಇನಾಂದಾರರಿಗೆ ಹಕ್ಕನ್ನು ಕೊಡಲು ಅವಕಾಶ ಕಲ್ಪಿಸಿಕೊಡಲಾಗಿದೆ. ಎಲ್ಲಾ ಇನಾಂ ಕಾಯ್ದೆಗಳು 1954ರಿಂದ 1973ರ ಒಳಗೆ ಜಾರಿಗೆ ಬಂದಿದ್ದು ಈಗಾಗಲೇ ಬಹುತೇಕ ಪ್ರಕರಣಗಳಲ್ಲಿ ಇನಾಂ ಜಮೀನನ್ನು ಅರ್ಹರಿರುವವರಿಗೆ ಪುನರ್

ಮಂಜೂರು ಮಾಡಲಾಗಿದೆ. ಭೂ ಸುಧಾರಣೆ ಜಾರಿಗೆ ಬಂದ ನಂತರ ಇನಾಂ ಜಮೀನುಗಳ ಬಗ್ಗೆ ನಿಗಧಿತ ಅವಧಿಯ ಒಳಗೆ ಬಂದ ಎಲ್ಲಾ ಅರ್ಜಿಗಳನ್ನು ಇತ್ಯರ್ಥ ಮಾಡಲು ಭೂ ನ್ಯಾಯ ಮಂಡಳಿಗಳು ಕ್ರಮ ಕೈಗೊಂಡಿರುತ್ತವೆ. ಈಗಾಗಲೇ ಹಲವು ಬಾರಿ ಕಾಲಾವಧಿಯನ್ನು ವಿಸ್ತರಿಸಿ ಸಾಕಷ್ಟು ಸಮಯಾವಕಾಶವನ್ನು ನೀಡಿದೆ. ಈಗ ಗೇಣಿ ಅರ್ಜಿ ಸಲ್ಲಿಸಲು ಕಾಲ ವಿಸ್ತರಿಸುವ ಯಾವ ಪ್ರಸ್ತಾವನೆಗಳು ಸರ್ಕಾರದ ಮಟ್ಟದಲ್ಲಿ ಇರುವುದಿಲ್ಲ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ನಾವು ಹರಿಜನ ಮತ್ತು ಗಿರಿಜನ ಉಂಬಳಿ ಜಮೀನನ್ನು ತೋಟಿ ತಳವಾರರ ಉಂಬಳಿ ಜಮೀನನ್ನು ಖಾಯಂ ಮಾಡುವುದಕ್ಕೆ ಒಂದು ಕಾನೂನು ಮಾಡಿದ್ದೆವು. ಅದು ಟೈಮು ಮುಗಿದು ಹೋಗಿದೆ. ಮತ್ತೆ ಹೆಚ್ಚು ಮಾಡಿ ಎಂದು ಕೇಳಿದ್ದೆವು. ಆದರೆ ಉತ್ತರ ನೋಡಿರುವವರು 54ರಿಂದ74 ಎಂದು ಹೇಳುತ್ತಾರೆ. 92ನೇ ಸಾಲಿನಲ್ಲಿ ಸಹ ಒಂದು ಸಾರಿ ಮಾಡಿದ್ದರು. ಆ ಇಲಾಖಾಧಿಕಾರಿಗಳು ಅದನ್ನು ನೋಡಲಿಕ್ಕೆ ಹೋಗಲಿಲ್ಲ. 91ರಲ್ಲಿ ನಾವು 6 ತಿಂಗಳು ಎಕ್ಸ್‌ಟೆನ್‌ಷನ್ ಕೊಟ್ಟಿದ್ದೆವು. ಆದರೂ ಸಹ ಅದನ್ನು ಖಾಯಂ ಮಾಡುವುದಕ್ಕೆ ಹೋಗಲಿಲ್ಲ. ಹರಿಜನರಿಗೆ ಎಲ್ಲಿ ಅರ್ಜಿ ಹಾಕಬೇಕು ಯಾವಾಗ ಬಜೆಟ್‌ನಲ್ಲಿ ಬರುತ್ತದೆ ಎಂಬುದ ಗೊತ್ತಿರುವುದಿಲ್ಲ. ಇಂತಹ ಒಂದು ಕಾನೂನು ಬಂದಿದೆ ಎನ್ನತಕ್ಕಂಥ ಮಾಹಿತಿ ಹಳ್ಳಿಯಲ್ಲಿರತಕ್ಕಂಥ ಹರಿಜನ ಮತ್ತು ಗಿರಿಜನರಿಗೆ ಎಲ್ಲಿ ಇರುತ್ತದೆ? ದಯಮಾಡಿ ಮತ್ತೆ ಈ ಕಾನೂನನ್ನು ಎಕ್ಸ್‌ಟೆಂಡ್ ಮಾಡಿ ಈಗ ತಾವು ಎಲ್ಲೆಲ್ಲಿ ವಿಲೇಜ್ ಅಕೌಂಟೆಂಟ್ಸ್ ಆ ಗ್ರಾಮದಲ್ಲಿ ಇದ್ದಾರೋ ಎಲ್ಲೆಲ್ಲಿ ಉಂಬಳಿ ಜಮಿನು ಇದೆಯೋ ಅಲ್ಲಿ ಆ ವಿಲೇಜ್ ಅಕೌಂಟೆಂಟ್ ಆ ಜನಗಳಿಂದ ಅರ್ಜಿ ತೆಗೆದುಕೊಂಡು ಖಾಯಂ ಮಾಡತಕ್ಕಂಥ ಒಂದು ಕಾನೂನು ಮಾಡಬೇಕು, ಇಲ್ಲದಿದ್ದರೆ ಅವರು ಅರ್ಜಿ ಕೊಡುವುದಿಲ್ಲ. ಈ ಉಂಬಳಿ ಜಮೀನನ್ನು ಖಾಯಂ ಮಾಡುವುದಕ್ಕೆ ಆಗುವುದಿಲ್ಲ. ಉಂಬಳಿ ಜಮೀನು ಎಂದು ನಿಮ್ಮ ಖಾತೆಯಲ್ಲಿ ಹಾಗೆಯೇ ಇರುತ್ತವೆ. ಆ ರೀತಿ ಮಾಡಿ ಹರಿಜನ ಮತ್ತು ಗಿರಿಜನರಿಗೆ ಸಹಾಯ ಮಾಡಬೇಕು ಎಂದು ಹೇಳಿ ತಮ್ಮ ಮೂಲಕ ಕಂದಾಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ :- ಮಾನ್ಯ ಅಧ್ಯಕ್ಷರೇ, ಈಗ ಇರತಕ್ಕಂಥಾದ್ದಕ್ಕೆ ಡೇಟ್ ಎಕ್ಸ್‌ಟೆಂಡ್ ಮಾಡಲು ಕೇಳುತ್ತಿದ್ದಾರೆ. ಡೇಟ್ ನಾವು ಬಹಳಷ್ಟು ಸಲ ಕೊಟ್ಟಿದ್ದೇವೆ. ಆದರೆ ಇಲ್ಲಿಯವರೆಗೂ ಆ ಕಾಯ್ದೆ ಅಡಿಯಲ್ಲಿ ಅರ್ಜಿಗಳು ಬಂದಿರುವುದು 2, 23, 424, ಅದರ ವಿಸ್ತೀರ್ಣ 13, 34, 316 ಅದರಲ್ಲಿ ಇದುವರೆಗೂ ವಿಲೇವಾರಿ ಆಗಿರುವ ಅರ್ಜಿಗಳು 2,04,778 ಇನ್ನೂ 17, 636 ಅರ್ಜಿಗಳ ವಿಲೇವಾರಿ ಮಾಡಬೇಕಾಗಿದೆ. 31-3-92ರವರೆಗೂ ನಾವು ಇದರ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ. ಆದರೆ ನಾವು ಬಹಳಷ್ಟು ಸಲ ಟೈಮ್ ಕೊಟ್ಟಿದ್ದೇವೆ. ಇನ್ನೂ ಕೂಡ ಹರಿಜನರಿಗೆ ಸಂಬಂಧಪಟ್ಟ ಪ್ರಕರಣಗಳು ಇದೆ. ಅದಕ್ಕೆ ಸರ್ಕಾರಕ್ಕೆ ಮಾನ್ಯ ಸದಸ್ಯರು ಮಾನವೀಯತೆ ದೃಷ್ಟಿಯಿಂದ ಹೇಳಿದ್ದಾರೆ ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಇಲ್ಲಿ ಮಾನ್ಯಮಂತ್ರಿಗಳು ಅಂಕಿಅಂಶಗಳನ್ನು ಕೊಟ್ಟಿರುವುದು ಪಟೇಲ್ ಉಂಬಳಿ ಶಾನುಭೋಗದ ಉಂಬಳಿ ಎಲ್ಲಾ ಸೇರಿಸಿ ಕೊಟ್ಟಿದ್ದಾರೆ. ನಿಮಗೆ ಗೊತ್ತಿದೆ ಪಟೇಲ್ ಮತ್ತು ಶಾನುಭೋಗರಿಗೆ ಅರ್ಜಿ ಬರೆಯುವುದು ಗೊತ್ತಿದೆ. ಅವರಿಗೆ ಗೆಜೆಟ್ ಓದುವುದು ಗೊತ್ತಿದೆ. ಅವರಿಗೆ ಯಾವ ಗೆಜೆಟ್ ಓದುವುದು ಗೊತ್ತಿದೆ ಸ್ವಾಮಿ. ಇನ್ನೂ ಉಂಬಳಿ ಜಮೀನು ಎನ್ನತಕ್ಕಂಥಾದ್ದು ನಿಮ್ಮ ಖಾತೆಯಲ್ಲಿ ಎಂಟ್ರಿ ಆಗಿರುತ್ತದೆ. ಎಂಟ್ರಿ ಆಗಿರುವುದನ್ನು ರೆಗ್ಯುಲರೈಸ್ ಮಾಡುವುದಕ್ಕೆ ಅಲ್ಲಿರುವ ವಿಲೇಜ್ ಅಕೌಂಟೆಂಟ್ ಅಲ್ಲಿಯೇ ಅರ್ಜಿ ತೆಗೆದುಕೊಂಡು ಅದನ್ನು ರೆವಿನ್ಯೂ ಇನ್ಸ್‌ಪೆಕ್ಟರ್‌ಗೆ ಕಳುಹಿಸಿ ಮಂಜೂರು ಮಾಡತಕ್ಕಂಥ ಕ್ರಮವನ್ನು ಸರ್ಕಾರವೇ ತೆಗೆದುಕೊಳ್ಳಬೇಕು. ಹರಿಜನರಿಂದ ಅರ್ಜಿ ಬರುವವರೆಗೂ ಕೂಡ ಕಾಯಬಾರದು. ಆ ರೀತಿ ಮಾಡಿದರೆ ಮಾತ್ರ ನ್ಯಾಯ ಒದಗಿಸಿಕೊಟ್ಟಂತೆ ಆಗುತ್ತದೆ. ಇಲ್ಲದಿದ್ದರೆ ಆಗುವುದಿಲ್ಲ. ದಯವಿಟ್ಟು ಅದನ್ನು ಮಾಡಿ ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಸದಸ್ಯರು ಹೇಸುವುದನ್ನು ಒಪ್ಪುತ್ತೇನೆ. ಏಕೆಂದರೆ ಹರಿಜ ಮತ್ತು ಗಿರಿಜನರಿಗೆ ಗೆಜೆಟ್‌ನಲ್ಲಿ ಬರತಕ್ಕಂಥಾದ್ದನ್ನು ನೋಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ವಿಲೇಜ್ ಅಕೌಂಟೆಂಟ್ಸ್‌ಗೆ ಅರಿವು ಮಾಡಿಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡುತ್ತೇನೆ.

ವಿಷಯ : ಗುಲ್ಬರ್ಗಾ ಜಿಲ್ಲೆಯಲ್ಲಿ ಸತತವಾಗಿ ಅತಿವೃಷ್ಟಿ, ಅನಾವೃಷ್ಟಿಯಿಂದ ಕಂಗಾಲಾದ ರೈತರಿಗೆ, ಕೂಲಿಕಾರರಿಗೆ, ಜೀವನೋಪಾಯಕ್ಕಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 130(415)

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಸತತವಾಗಿ ಎರಡು ವರ್ಷಗಳಿಂದ ಅತೀವೃಷ್ಟಿಯಿಂದ ಹಾಗೂ ಅನಾವೃಷ್ಟಿಯಿಂದ ರೈತರ ಬೆಳೆಗಳು ನಾಶವಾಗಿ ಮಳೆಯಿಲ್ಲದೇ ಬಿತ್ತಣಿಕೆಯಾಗದೇ ರೈತರು ಕಂಗಾಲಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸೇಡಂ ತಾಲ್ಲೂಕ್ ಪಂಚಾಯಿತಿ ಸಭೆ ದಿನಾಂಕ 5.8.94ರಂದು ಕೃಷಿ ಅಧಿಕಾರಿಗಳು ಸೇಡಂ ತಾಲ್ಲೂಕಿನಲ್ಲಿ ಬಿದ್ದ ಮಳೆಯ ವರದಿಯ ಆಧಾರದ ಮೇಲೆ ತೀವ್ರ ಬರ ಎಂದು ವರದಿ ನೀಡಿರುವುದು ನಿಜವೇ? ಹಾಗಿದ್ದಲ್ಲಿ, ಈ ವಿಷಯದಲ್ಲಿ ಕೈಗೊಂಡ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ಹೌದು.